ಸಂಯುಕ್ತ ಕರ್ನಾಟಕ

# ಗಮನ ಸೆಳೆದ ಜೈನ್ ವಿವಿ ನುಡಿ ಸಂಭ್ರಮ



ನಗರದಲ್ಲಿನ ಅನೇಕ ಕಾಲೇಜುಗಳನ್ನು, ಅಲ್ಲಿನ ವಿದ್ಯಾರ್ಥಿಗಳನ್ನು ಗಮನಿಸಿದರೆ ಇಲ್ಲಿ ಕನ್ನಡ ಇದೆಯೇ ಎಂಬ ಅನುಮಾನ ಕಾಡುತ್ತದೆ. ಆದರೆ, ಇಂತಹ ಕಾಲೇಜುಗಳಲ್ಲೂ ಕನ್ನಡದ ಕಂಪು ಇದೆ ಎಂಬುದು ಅಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಂಡಾಗ. ನಗರದ ಜೈನ್ ವಿಶ್ವವಿದ್ಯಾಲಯದ ಕನ್ನಡ ವಿಭಾಗ ನುಡಿ ಸಂಭ್ರಮ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಇದರಲ್ಲಿ ಕನ್ನಡದ ಇಂಪು, ಕಂಪು ವಿವಿ ಆವರಣದಲ್ಲಿ ಪಸರಿಸಿತ್ತು.

ಆ ದಿನ ಅಲ್ಲಿ ಪಾಠ ಪ್ರವಚನಗಳಿಗಿಂತ ನಾಡಿನ ಸಂಸ್ಕೃತಿಯನ್ನು ಬಿಂಬಿಸುವಂತಹ ಹಾಗೂ ಇದರಿಂದ ವಿದ್ಯಾರ್ಥಿಗಳಲ್ಲಿ ಕನ್ನಡ ನಾಡಿನ ಸಂಸ್ಕೃತಿಯ ಶ್ರೀಮಂತಿಕೆಯನ್ನು ಬಿಂಬಿಸುವ ಕಾರ್ಯವಾಯಿತು.

ವಿದ್ಯಾರ್ಥಿಗಳ ಬದುಕಿನಲ್ಲಿ ಕೇವಲ ಅಕಾಡೆಮಿಕ್ ಶಿಕ್ಷಣ ಮಾತ್ರ ಇದ್ದಲ್ಲಿ ಅವರ ಬದುಕು ಮಹತ್ವಪೂರ್ಣ ಎನಿಸಿಕೊಳ್ಳುವುದಿಲ್ಲ. ಶಿಕ್ಷಣದ ಜತೆಗೆ ಸಂಗೀತ, ನಟನೆ, ನೃತ್ಯ ಇತ್ಯಾದಿ ಹವ್ಯಾಸಗಳು ಇದ್ದಲ್ಲಿ ಶಿಕ್ಷಣ ಪರಿಪೂರ್ಣ ಎನಿಸಲಿದೆ. ಆದರಲ್ಲೂ ನಾಡಿನ ಸಂಸ್ಕೃತಿಯನ್ನು ಬಿಂಬಿಸುವಂತಹ ಕಲೆಗಳತ್ತ ಆಸಕ್ತಿ ತಾಳಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಹೇಳುವ ಕಾರ್ಯವನ್ನು ಮಾಡಲಾಯಿತು.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಲಾವಿದೆ ವೀಣಾ ಸುಂದರ್ ಅವರು, ನಾಡಿನ ಸಂಸ್ಕೃತಿಯನ್ನು ವಿದ್ಯಾರ್ಥಿಗಳೇ ಬೆಳೆಸಬೇಕು ಎಂಬ ಸಂದೇಶ ನೀಡಿದರಲ್ಲದೆ, ಈಗಿನ ಯುವಜನತೆ ಸಾಮಾಜಿಕ ಜಾಲತಾಣಗಳತ್ತ ಆಸಕ್ತಿ ತಾಳಿದ್ದಾರೆ. ಇದು ಜೀವನದಲ್ಲಿ ಮುಖ್ಯವಾಗಿದೆ. ನಿಜ. ಆದರೆ, ಈ ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಕನ್ನಡದ ಬಳಕೆ ಮಾಡುವ ಮೂಲಕ ನಮ್ಮ ಭಾಷೆಯನ್ನು ಬೆಳೆಸುವಂತಹ ಹಾಗೂ ಇನ್ನಿತರರಿಗೆ ಪರಿಚಯಿಸುವ ಕೆಲಸ ಮಾಡಿ ಎಂದು ಕಿವಿಮಾತು ಹೇಳಿದರು.

ಕನ್ನಡ ನಾಡು-ನುಡಿಯ ಸಂಭ್ರಮ ವರ್ಷಪೂರ್ತಿ ಪ್ರತಿ ಮನಸಿನಲ್ಲಿ ಮೊಳಗಬೇಕೆಂಬ ಆಶಯವನ್ನು ಹೊಂದಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ವೃಂದದಿಂದ ಮೂಡಿಬಂದ ನಾಡಗೀತೆಯ ನಿನಾದ, ಭಾವಗೀತಾ ಗಾಯನ, ಭರತನಾಟ್ಯ ನೃತ್ಯ, ನಮ್ಮ ನಾಡು ಯಾಕೆ ಹೀಗಿದೆ? ನಾಟಕ ಕಾರ್ಯಕ್ರಮಗಳು ಪ್ರೇಕ್ಷಕರ ಮನಸ್ಸನ್ನು ಸೆಳೆಯುವಲ್ಲಿ ಯಶಸ್ವಿಯಾದವು.

ನುಡಿ ಸಂಭ್ರಮ ಕಾರ್ಯಕ್ರಮ ಯಶ ಕಾಣಲು ವಿವಿಯ ಪರೀಕ್ಷಾ ವಿಭಾಗದ ಸಲಹೆಗಾರ ಡಾ. ಬಿ.ಟಿ. ವೆಂಕಟೇಶ್, ಸ್ಕೂಲ್ ಆಫ್ ಕಾಮರ್ಸ್‌ನ ಕೇಂದ್ರ ಮುಖ್ಯಸ್ಥ ಡಾ. ಬಿ.ಎ. ನಾಸಾ, ನಿರ್ದೇಶಕ ಅಭಿಷೇಕ್ ಪ್ರಸಾದ್ ಕಾರಣೀಭೂತರಾದರು.